ಮಾಯೆಯ **ವಿಕ್ಷೇಪಶಕ್ತಿ**ಯ ಬಗ್ಗೆಯೂ ಸೊಗಸಾದ ಕಥೆಯೊಂದನ್ನು ಶ್ರೀರಾಮಕೃಷ್ಣರು ಹೇಳುತ್ತಿದ್ದರು: ನಾರದರು, "ನಿನ್ನ ಮಾಯಾಶಕ್ತಿಯನ್ನು ತೋರು" ಎಂದು ಕೃಷ್ಣನನ್ನು ಕೇಳಿಕೊಂಡರು. ಕೃಷ್ಣ "ಆಗಲಿ" ಎಂದ. ಇಬ್ಬರೂ ತಿರುಗಾಡುತ್ತಿದ್ದರು. ಕೃಷ್ಣನಿಗೆ ಬಾಯಾರಿಕೆಯಾಯಿತು. ನೀರು ತಾರೆಂದು ನಾರದನನ್ನು ಕಳಿಸಿದ. ಹತ್ತಿರದಲ್ಲಿ ಎಲ್ಲಿಯೂ ನೀರು ಕಾಣಲಿಲ್ಲ. ಸ್ವಲ್ಪ ದೂರ ಹೋದ ಮೇಲೆ ಒಂದು ನದಿ ಕಂಡಿತು. ಅದರ ತೀರದಲ್ಲಿ ಒಬ್ಬ ಸುಂದರವಾದ ಹುಡುಗಿ ಕುಳಿತಿದ್ದಳು. ನಾರದರು ಅವಳನ್ನು ಪ್ರೀತಿಯಿಂದ ಮಾತನಾಡಿಸಿದರು. ಇಬ್ಬರೂ ಮದುವೆಯಾದರು. ಮಕ್ಕಳೂ ಆದವು. ನಾರದರು ಹೀಗೆ ಸಂಸಾರ ಕಟ್ಟಿಕೊಂಡು ಸಂತೋಷವಾಗಿದ್ದರು. ಒಮ್ಮೆ ಆ ಊರಿನಲ್ಲಿ ಕ್ಷಾಮ ಬಂತು. ಹೆಂಡತಿ ಮಕ್ಕಳೊಂದಿಗೆ ನಾರದರು ಊರು ಬಿಟ್ಟು ಹೊರಟರು. ದಾರಿಯಲ್ಲಿ ಒಂದು ಸೇತುವೆ. ಅದನ್ನು ದಾಟುವಾಗ, ಪ್ರವಾಹ ಬಂತು. ನೀರಿನ ರಭಸಕ್ಕೆ ಮಕ್ಕಳೆಲ್ಲಾ ಕೊಚ್ಚಿಕೊಂಡು ಹೋದರು. ಕೊನೆಗೆ ಹೆಂಡತಿಯೂ ಮುಳುಗಿಹೋದಳು. ಹೆಂಡತಿ ಮಕ್ಕಳ ಸಾವಿನಿಂದ ಕಂಗೆಟ್ಟ ನಾರದರು, ದಡಕ್ಕೆ ಬಂದು ಕುಳಿತು, ಗೊಳೋ ಎಂದು ಅಳಲಾರಂಭಿಸಿದರು. ಆಗ ಕೃಷ್ಣನು ಬಂದು, "ನಾರದರೇ, ನೀರು ಎಲ್ಲಿ? ನೀವು ಏತಕ್ಕೆ ಅಳುತ್ತಿದ್ದೀರಿ?" ಎಂದು ಕೇಳಿದನು. ಭಗವಂತನ ದರ್ಶನದಿಂದ ನಾರದರಿಗೆ ಆಶ್ಚರ್ಯವಾಯಿತು. ಆಗ "ಮಾಯೆ ಎಂದರೇನು?" ಎಂದು ಅವರಿಗೆ ಅರ್ಥವಾಯಿತು. ಅವರು, "ಹೇ ದೇವ! ನಿನಗೆ ನಮಸ್ಕಾರ. ನಿನ್ನ ಅದ್ಭುತವಾದ ಮಾಯಾಶಕ್ತಿಗೂ ನಮಸ್ಕಾರ" ಎಂದರು.

ಮಾಯೆಯನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅದನ್ನು ಅರಿತೊಡನೆ ಅದು ಮಾಯವಾಗುವುದು. ಹಾಗೆಂದೇ ಇಡೀ ಜೀವನವೆಂಬುದು ಒಂದು ದೊಡ್ಡ ಸ್ವಪ್ನವಲ್ಲದೇ ಮತ್ತೇನಿಲ್ಲ. ಕನಸನ್ನು, 'ಕನಸು' ಎಂದು ತಿಳಿದೊಡನೆ ಅದು ಕರಗಿಹೋಗುವುದು. ಹಾಗೆಯೇ ಈ ಜೀವನದ ನೈಜಾರ್ಥವನ್ನು ಕಂಡುಕೊಂಡಾಗ, ಅವಿದ್ಯೆಯ ಈ ಮಿಥ್ಯಾಜೀವನ ಕೊನೆಗೊಳ್ಳುವುದು. ಇದನ್ನು ಸೂಚಿಸುವ ಸುಂದರ ಕಥೆಯೊಂದನ್ನು ಶ್ರೀರಾಮಕೃಷ್ಣರು ಹೀಗೆ ಹೇಳುತ್ತಾರೆ: ಒಬ್ಬ ರೈತನಿದ್ದ. ಅವನು ಜ್ಞಾನಿ. ಒಂದು ದಿನ ಅವನು ಹೊಲದಲ್ಲಿ ಕೆಲಸ ಮಾಡುತ್ತಿದ್ದ. ಅವನ ಸಂಗಡಿಗರು ಬಂದು, ಅವನ ಮಗನಿಗೆ ಕಾಲರಾ ಬಂದಿದೆ ಎಂದರು. ರೈತ ಮನೆಗೆ ಬಂದು ಮಗನಿಗೆ ಚಿಕಿತ್ಸೆ ಕೊಡಿಸಿದ. ಆದರೂ ಮಗ ಸತ್ತುಹೋದ. ನೆಂಟರಿಷ್ಟರೆಲ್ಲ ಅಳಲಾರಂಭಿಸಿದರು. ಆದರೆ ರೈತ ಏನೂ ಆಗಿಲ್ಲವೇನೋ ಎಂಬಂತೆ ಇದ್ದ. ಮನೆಯವರಿಗೆ ಅವನೇ ಸಮಾಧಾನ ಮಾಡಿದ. ಅನಂತರ ಹೊಲಕ್ಕೆ ಕೆಲಸಕ್ಕಾಗಿ ಹೋದ. ಮನೆಗೆ ಹಿಂದಿರುಗಿದಾಗ, ಹೆಂಡತಿ ತುಂಬಾ ಅಳುತ್ತಿದ್ದಳು, "ನೀವು ಎಷ್ಟು ನಿರ್ದಯಿ, ಮಗುವಿಗಾಗಿ ಒಂದು ತೊಟ್ಟೂ ಕಣ್ಣೀರು ಹಾಕಲಿಲ್ಲವಲ್ಲ!" ಎಂದು ನಿಂದಿಸಿದಳು. ಅದಕ್ಕೆ ಆ ರೈತನು ಹೀಗೆಂದನು, "ನಾನು ಏತಕ್ಕೆ ಅಳಲಿಲ್ಲ, ಗೊತ್ತೇ? ನೆನ್ನೆ ನನಗೊಂದು ಕನಸಾಯಿತು. ಅಲ್ಲಿ ನಾನು ಒಬ್ಬ ರಾಜನಾಗಿದ್ದೆ. ನನಗೆ ಎಂಟುಜನ ಮಕ್ಕಳಿದ್ದರು. ಅವರೊಡನೆ ನಾನು ಸಂತೋಷವಾಗಿದ್ದೆ. ಅನಂತರ ನನಗೆ ಎಚ್ಚರವಾಯಿತು. ಈಗ ನನಗೆ ಏನು ಮಾಡಬೇಕೆಂದು ತೋಚುತ್ತಿಲ್ಲ. ಆ ಎಂಟು ಮಕ್ಕಳಿಗಾಗಿ ನಾನು ಅಳಲೇ, ಈ ಒಂದು ಮಗುವಿಗಾಗಿ ಅಳಲೆ." ಶ್ರೀರಾಮಕೃಷ್ಣರು ಹೇಳುತ್ತಾರೆ, "ರೈತನು ಒಬ್ಬ ಜ್ಞಾನಿ. ಜಾಗ್ರತಾವಸ್ಥೆಯೂ ಕನಸಿನಂತೆಯೇ ಸುಳ್ಳು, ಎಂದೆಂದಿಗೂ ಇರುವ ಸತ್ಯ ಒಂದೇ; ಅದೇ 'ಆತ್ಮ' ಎಂಬ ಸಾಕ್ಷಾತ್ಕಾರ ಅವನಿಗೆ ಉಂಟಾಗಿತ್ತು."


ಇದೆಲ್ಲ ಮಿಥ್ಯೆಯೆಂದು ತಿಳಿದರೂ ನಮ್ಮ ಸಂಸ್ಕಾರಗಳ ಬಲದಿಂದ, ನಮ್ಮ ಮೇಲೆ ಮಾಯೆಯ ಪ್ರಭಾವ ಮುಂದುವರಿದೇ ಇರುತ್ತದೆ. ಇದಕ್ಕೆ ಶ್ರೀರಾಮಕೃಷ್ಣರು ನೀಡುವ ಒಂದು ನಿದರ್ಶನ ಸ್ವಾರಸ್ಯವಾಗಿದೆ: ಕನಸಿನಲ್ಲಿ ಒಬ್ಬ ಒಂದು ಹುಲಿಯನ್ನು ಕಂಡ. ಹೆದರಿಕೆಯಿಂದ ಎದ್ದು ಕುಳಿತ. ಕನಸು ಮಾಯವಾಯಿತು. ಆದರೂ ಅವನ ಎದೆ ಡವಡವ ಬಡಿಯುತ್ತಿತ್ತು.

ಮಾಯೆಯಿಂದ ತಪ್ಪಿಸಿಕೊಳ್ಳಲು, 'ನೇತಿ, ನೇತಿ' ಮಾರ್ಗವನ್ನು ಅವಲಂಬಿಸಬೇಕು ಎಂದು ವೇದಾಂತ ಹೇಳುತ್ತದೆ. ಅವಿದ್ಯೆಯಿಂದ ಉಂಟಾದ ಸಂಗತಿಗಳನ್ನು, 'ಇವಲ್ಲ, ಇವಲ್ಲ' ಎಂದು ನಿರ್ಧರಿಸಿಕೊಂಡು, ಕಡೆಗೆ ಯಾವುದು ಉಳಿಯುವುದೋ, ಅದೇ ಪರಬ್ರಹ್ಮವೆಂದು ತಿಳಿದುಕೊಳ್ಳುವ ಜ್ಞಾನಮಾರ್ಗ ಅದು. ಅದು ಹೇಗೆ? ಶ್ರೀರಾಮಕೃಷ್ಣರು ವಿವರಿಸಿ ಹೇಳುತ್ತಾರೆ: "ಕೆಲವು ಕಳ್ಳರು ಒಂದು ಗದ್ದೆಗೆ ಬಂದರು. ಅಲ್ಲಿ ಕಳ್ಳಕಾಕರನ್ನು ಬೆದರಿಸಲು ಒಂದು ಬೆದರುಬೊಂಬೆಯನ್ನು ಇಟ್ಟಿದ್ದರು. ಅದನ್ನು ನೋಡಿ, ಭಯವಾಗಿ ಕಳ್ಳರಿಗೆ ಮುಂದೆ ಹೋಗಲು ಧೈರ್ಯ ಬರಲಿಲ್ಲ. ಅದರಲ್ಲಿ ಒಬ್ಬ ಧೈರ್ಯದಿಂದ ಮುಂದೆ ಹೋಗಿ ನೋಡಿದ. ಅದು ಬರೀ ಬೊಂಬೆಯೆಂದು ತಿಳಿಯಿತು. ಅವನು ತನ್ನ ಸಂಗಡಿಗರ ಹತ್ತಿರ ಬಂದು, 'ಹೆದರಬೇಕಾಗಿಲ್ಲ' ಎಂದು ಹೇಳಿದ. ಆದರೂ ಉಳಿದವರು ಅಂಜುತ್ತಿದ್ದರು. ಕಡೆಗೆ ಅವನು, ಬೊಂಬೆಯ ಮೇಲೆ ಹತ್ತಿ ಕುಳಿತು, 'ಇದೇನೋ ಅಲ್ಲ, ಇದೇನೂ ಅಲ್ಲ' ಎಂದು ಕೂಗಿ ಹೇಳಿದ." ಹೀಗೆಯೇ 'ಜ್ಞಾನಮಾರ್ಗ' ಕೂಡ ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. •

# ಶ್ರೀ ಸಿದ್ಧಾಂತ ಶಿಖಾಮಣಿ

ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುತ್ತಿರುವ, ಸಂಸ್ಕೃತ ವಾಙ್ಮಯದಲ್ಲಿ ಅತ್ಯಂತ ಪ್ರಾಚೀನವಾದ ಮತ್ತು ಕ್ರಮಬದ್ಧವಾದ ಗ್ರಂಥವೇ ಶ್ರೀ ಸಿದ್ಧಾಂತ ಶಿಖಾಮಣಿ ಎಂಬುದರಲ್ಲಿ ಎರಡು ಮಾತಿಲ್ಲ. ವೀರಶೈವ ಸಿದ್ಧಾಂತದ ಷಟ್‌ಸ್ಥಲ ಸಿದ್ಧಾಂತವನ್ನು ನೂರೊಂದು ಅವಾಂತರ ಸ್ಥಳಗಳ ರೂಪದಲ್ಲಿ ಮೊಟ್ಟಮೊದಲು ವಿಶ್ಲೇಷಿಸಿದವರೆಂದರೆ ಇದರ ಕರ್ತೃಗಳಾದ ಶ್ರೀ ಶಿವಯೋಗಿ ಶಿವಾಚಾರ್ಯರೇ. ಈ ಸಿದ್ಧಾಂತವನ್ನು ಮೊಟ್ಟಮೊದಲು ಶಿವನು ಶಿವೆಗೆ ಮತ್ತು ತನ್ನ ಶಿವಗಣಕ್ಕೆ ಉಪದೇಶಿಸಿದ್ದನು. ಈ ಶಿವಗಣದಲ್ಲೊಬ್ಬರಾದ ಶ್ರೀ ರೇಣುಗಣೇಶ್ವರನು ಅಗಸ್ತ್ಯ ಮಹರ್ಷಿಗೆ ಉಪದೇಶಿಸಿದ ಶಿವಾದ್ವೈತ ಸಿದ್ಧಾಂತವನ್ನೇ ಶ್ರೀ ಶಿವಯೋಗಿ ಶಿವಾಚಾರ್ಯರು ರೇಣುಕ–ಅಗಸ್ತ್ಯರ ಸಂವಾದರೂಪವಾಗಿ (ಚಿತ್ರ ನೋಡಿ) ವಿವರಿಸಿದ್ದನ್ನು ಇಲ್ಲಿ ಕಾಣಬಹುದಾಗಿದೆ.



ಶಿವಾಗಮಗಳಲ್ಲಿ ಮತ್ತು ಶೈವ ಪುರಾಣಗಳಲ್ಲಿ ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯವೆಂಬ ಷಟ್‌ಸ್ಥಲಗಳ ನಿರೂಪಣೆಯು ಬಂದಿರುವುದನ್ನು ಕಾಣಬಹುದಾಗಿದೆ. ಆದರೆ ಶ್ರೀ ಶಿವಯೋಗಿ ಶಿವಾಚಾರ್ಯರು ಈ ಷಟ್‌ಸ್ಥಲಗಳನ್ನು ಮೊದಲು **ಅಂಗಷಟ್‌ಸ್ಥಲ** ಮತ್ತು **ಲಿಂಗಷಟ್‌ಸ್ಥಲ**ವೆಂಬುದಾಗಿ ವಿಭಾಗಿಸಿ, ಅವುಗಳನ್ನು ಕ್ರಮವಾಗಿ ೪೪ ಮತ್ತು ೫೭ ಸೂಕ್ಷ್ಮ ಭಾಗಗಳನ್ನಾಗಿ ವಿಂಗಡಿಸಿದ್ದಾರೆ. ಒಬ್ಬ ಸಾಧಕನು ಭಕ್ತಸ್ಥಲದಿಂದ ಐಕ್ಯಸ್ಥಲದವರೆಗೆ ತಲುಪಬೇಕಾದರೆ ಅತಿ ಸೂಕ್ಷ್ಮಾತಿಸೂಕ್ಷ್ಮಗಳಾದ ಮಾನಸಿಕ ವಿಕಾಸದ ಹಂತಗಳನ್ನು ಹೇಗೆ ತಲುಪುವನೆಂಬುದನ್ನು ಅತಿ ಮಾರ್ಮಿಕವಾಗಿ ಶ್ರೀ ಶಿವಯೋಗಿ ಶಿವಾಚಾರ್ಯರು ಈ ಗ್ರಂಥದಲ್ಲಿ ಪ್ರತಿಪಾದಿಸಿದ್ದನ್ನು ಕಾಣಬಹುದು. ಅವರು ಮಾಡಿದ ಸಾಧಕನ ಈ ಮಾನಸಿಕ ವಿಕಾಸದ ಹಂತಗಳೇ **ಏಕೋತ್ತರಶತಸ್ಥಲಗಳು** (೧೦೧ ಸ್ಥಲಗಳು). ಈ ಸೂಕ್ಷ್ಮವಾದ ವಿಶ್ಲೇಷಣೆಯು ನಮಗೆ ಪ್ರಪ್ರಥಮವಾಗಿ ಕಂಡುಬರುವುದು ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿಯೇ. ಆದ್ದರಿಂದ ವೀರಶೈವ ಸಿದ್ಧಾಂತವನ್ನು ಸಕ್ರಮವಾಗಿ ಶಾಸ್ತ್ರಬದ್ಧವಾಗಿ ನಿರೂಪಿಸಿದ ಪ್ರಥಮ ಶಾಸ್ತ್ರೀಯ ಗ್ರಂಥವೆಂದರೆ ಶ್ರೀ ಸಿದ್ಧಾಂತ ಶಿಖಾಮಣಿಯೇ ಆಗಿದೆ. ಇದರ ಶ್ರೇಯಸ್ಸು ಶ್ರೀ ಶಿವಯೋಗಿ ಶಿವಾಚಾರ್ಯರಿಗೇನೇ ಸಲ್ಲತಕ್ಕುದಾಗಿದೆ.

ಈ ಗ್ರಂಥಕ್ಕೆ ಶ್ರೀ ಶಿವಯೋಗಿ ಶಿವಾಚಾರ್ಯರು 'ಶ್ರೀ ಸಿದ್ಧಾಂತ ಶಿಖಾಮಣಿ'ಯೆಂಬ ನಾಮಕರಣವನ್ನು ಮಾಡಿದ್ದಾರೆ. ಈ ಗ್ರಂಥಕ್ಕೆ ಈ ಪ್ರಕಾರವಾದ ಹೆಸರನ್ನಿಡುವುದರಲ್ಲಿಯೂ ಒಂದು ರಹಸ್ಯವು ಅಡಗಿದೆ.

**ಸರ್ವೇಷಾಂ ಶೈವತಂತ್ರಾಣಾಮುತ್ತರತ್ವಾನ್ನಿರುತ್ತರಮ್ ।**
**ನಾಮ್ನಾ ಪ್ರತೀಯತೇ ಲೋಕೇ ಯತ್ಸಿದ್ಧಾಂತ ಶಿಖಾಮಣೇ ॥** (*ಸಿದ್ಧಾಂತ ಶಿಖಾಮಣಿ,* ೧–೩೦)

ಇದರ ಅರ್ಥ ಹೀಗಿದೆ: ಇಪ್ಪತ್ತೆಂಟು ಶಿವಾಗಮಗಳಿಗೆ ಸಿದ್ಧಾಂತಾಗಮಗಳೆಂಬುದಾಗಿ ಕರೆಯಲಾಗಿದೆ. ಈ ಸಿದ್ಧಾಂತಾಗಮಗಳ ಉತ್ತರಭಾಗದಲ್ಲಿ ವೀರಶೈವ ಸಿದ್ಧಾಂತವು ನಿರೂಪಿಸಲ್ಪಟ್ಟಿದೆ. ಹೀಗೆ ಸಿದ್ಧಾಂತಾಗಮಗಳ ಕೊನೆಯ ಭಾಗದಲ್ಲಿ ಹೇಳಲ್ಪಟ್ಟ ಸಿದ್ಧಾಂತವನ್ನೇ ಈ ಗ್ರಂಥದಲ್ಲಿ ವಿಸ್ತಾರರೂಪವಾಗಿ ನಿರೂಪಿಸಿರುವುದರಿಂದ ಇದಕ್ಕೆ ಸಿದ್ಧಾಂತಗಳ ಶಿಖಾಮಣಿಯೆಂಬುದಾಗಿ ಹೆಸರಿಸಲಾಗಿದೆ. ಅಂದರೆ, ಇದುವೇ ಕೊನೆಯದಾದ ಸಿದ್ಧಾಂತವು, ಇದರ ಮೇಲೆ ಮತ್ತೊಂದು ಸಿದ್ಧಾಂತವಿರುವುದಿಲ್ಲ ಎಂಬುದಾಗಿ ತಿಳಿದುಕೊಳ್ಳಬೇಕು.

ವೀರಶೈವ ವಾಙ್ಮಯದ ವಿಶ್ವಕೋಶದಂತಿರುವ 'ಶ್ರೀ ಸಿದ್ಧಾಂತ ಶಿಖಾಮಣಿ'ಯ ಸ್ಥೂಲ ಪರಿಚಯವನ್ನು ಈ ಲೇಖನವು ನೀಡುತ್ತದೆ. ವಿದ್ವತ್ಪೂರ್ಣವಾದ ಈ ಲೇಖನದ ಕರ್ತೃಗಳಾದ ಪೂಜ್ಯ ಸ್ವಾಮೀಜಿಯವರು ಕಾಶೀ ವೀರಶೈವ ಪಂಚಾಚಾರ್ಯ ಪೀಠದ ಅಧಿಪತಿಗಳು. ವಿಶೇಷ ಶಾಸ್ತ್ರಜ್ಞಾನ ಹೊಂದಿರುವ ಸ್ವಾಮೀಜಿಯವರು ಶ್ರೀ ಸಿದ್ಧಾಂತ ಶಿಖಾಮಣಿಯ ಬಗ್ಗೆ ಮಾಡಿರುವ ಪ್ರವಚನಗಳು ಎರಡು ಸಂಪುಟಗಳಲ್ಲಿ ಪ್ರಕಟವಾಗಿವೆ.

ಹಿಮಾಲಯ ಪರ್ವತದ ಶಿಖರಶ್ರೇಣಿಗಳಲ್ಲಿ ಗೌರೀಶಂಕರ ಶಿಖರವು ಅತ್ಯುನ್ನತವಾಗಿದ್ದು, ಅದಕ್ಕಿಂತಲೂ ಉನ್ನತವಾದ ಶಿಖರವು ಬೇರೊಂದಿಲ್ಲವಾದ್ದರಿಂದ, ಇದಕ್ಕೆ 'ಶ್ರೀ ಸಿದ್ಧಾಂತ ಶಿಖಾಮಣಿ' ಯೆಂಬ ನಾಮಕರಣವು ಅನ್ವರ್ಥಕವಾಗಿದೆ. ಶ್ರೀ ಶಿವಯೋಗಿ ಶಿವಾಚಾರ್ಯರು ಶ್ರೀ ಸಿದ್ಧಾಂತ ಶಿಖಾಮಣಿಯನ್ನು ಬರೆಯಬೇಕಾದರೆ, ೨೮ ಶಿವಾಗಮಗಳನ್ನು ಚೆನ್ನಾಗಿ ಅಭ್ಯಾಸ ಮಾಡಿರುವುದಲ್ಲದೆ, ವ್ಯಾಸೋಕ್ತವಾದ ಶಿವಸಂಬಂಧಿ ಸಕಲ ಪುರಾಣಗಳನ್ನೂ ನೋಡಿರುವುದಾಗಿ ತಿಳಿಸಿದ್ದಾರೆ. ಇನ್ನು ತಾವು ಬರೆದ ಗ್ರಂಥದ ಪ್ರಯೋಜನವನ್ನು ಹೀಗೆ ನಿರೂಪಿಸುತ್ತಾರೆ: "ಈ ಗ್ರಂಥದಲ್ಲಿ ಪ್ರತಿಪಾದಿತವಾದ ವಿಷಯವು ವೈದಿಕ ಮಾರ್ಗಕ್ಕೆ ವಿರೋಧವಲ್ಲದ, ಆಗಮಸಮ್ಮತವಾದ ಸದಾಚಾರವನ್ನು ಪ್ರತಿಪಾದಿಸುವಂತಹುದು; ನಾಸ್ತಿಕವಾದವನ್ನು ನಿರಸನ ಮಾಡುವಂತಹುದು ಮತ್ತು ವಿವೇಕಿಗಳಿಗೆ ಸಂತೋಷವನ್ನುಂಟುಮಾಡುವಂತಹದು."

ಈ ಗ್ರಂಥನಾಮದ ಸಂಪೂರ್ಣವಾದ ವಿಶ್ಲೇಷಣೆಯನ್ನು ಶ್ರೀ ಶಿವಯೋಗಿ ಶಿವಾಚಾರ್ಯರು ಈ ಗ್ರಂಥದ ಕೊನೆಯಲ್ಲಿ ಹೀಗೆ ಮಾಡುತ್ತಾರೆ: "ವೇದ ಮತ್ತು ಆಗಮಗಳಲ್ಲಿ ಪ್ರತಿಪಾದಿಸಲ್ಪಟ್ಟ ವೀರಶೈವ ಸರಣಿಯನ್ನೇ ಈ ಗ್ರಂಥದಲ್ಲಿ ಅನುಸರಿಸಲಾಗಿದೆ. ನೂರಾಎಂಟು ಸ್ಥಲಾತ್ಮಕವಾದ ವೀರಶೈವ ಷಟ್‌ಸ್ಥಲಮಾರ್ಗವನ್ನು ಪ್ರಕಾಶಗೊಳಿಸುವ ಶ್ರೇಷ್ಠವಾದ ಮಣಿಯೋಪಾದಿಯಲ್ಲಿ ಈ ಗ್ರಂಥವು ವಿರಾಜಮಾನವಾಗಿದೆ. ಜೀವ ಮತ್ತು ಈಶ್ವರರ ಸಾಮರಸ್ಯರೂಪವಾದ ಪದ್ಮವನ್ನು ಅರ್ಥಾತ್ ಕಮಲವನ್ನು ಅರಳಿಸುವುದರಲ್ಲಿ ಈ ಗ್ರಂಥವು ತರಣಿ ಅರ್ಥಾತ್ ಸೂರ್ಯಪ್ರಾಯವಾಗಿರುತ್ತದೆ. ಹಾಗೂ ಮಂಗಲಕರವಾದ ಶಿವರಹಸ್ಯಾರ್ಥವನ್ನು ಪ್ರಕಾಶಗೊಳಿಸುವ ಚಿಂತಾಮಣಿಯೋಪಾದಿಯಲ್ಲಿ ಇರುವಂತಹ ದಿವ್ಯಮಣಿಯೇ ಈ ಸಿದ್ಧಾಂತ ಶಿಖಾಮಣಿಯು. ಈ ಗ್ರಂಥವನ್ನು ಯಾರು ಬರೆಯುವರೋ ಅಥವಾ ಅನ್ಯರಿಂದ ಬರೆಯಿಸುವರೋ ಮತ್ತು ಯಾರು ಇದನ್ನು ಭಕ್ತಿಯಿಂದ ಶ್ರವಣಮಾಡುವರೋ ಹಾಗೂ ಅನ್ಯರಿಗೆ ಕ್ರಮೇಣ ಮಾಡಿಸುವರೋ, ಅವರು ನಿರ್ಮಲವಾದ ಐಹಿಕ ಸುಖ-ಭೋಗವನ್ನು ಪಡೆದು, ಕೊನೆಗೆ ಪರತರವಾದ ಮುಕ್ತಿಯನ್ನು ಸಹ ಹೊಂದುವರು."

ಈ ಗ್ರಂಥಕ್ಕೆ ಶ್ರೀ ಸಿದ್ಧಾಂತಶಿಖಾಮಣಿಯೆಂಬುದಾಗಿ ಹೆಸರಿಸಿರುವಲ್ಲಿ ಇರುವ ಇನ್ನೊಂದು ರಹಸ್ಯವೆಂದರೆ, ವೇದಾಗಮಸಮ್ಮತವಾದ ದ್ವೈತಾದ್ವೈತ ಸಿದ್ಧಾಂತಗಳನ್ನು ಖಂಡಿಸದೆ, ಅವೆರಡರಲ್ಲಿ ಸಮನ್ವಯವನ್ನು ಸಾಧಿಸಿ, ಸಮನ್ವಯಾತ್ಮಕವಾದ ಸರ್ವಗ್ರಾಹ್ಯವಾದ ಶ್ರೇಷ್ಠ ಸಿದ್ಧಾಂತವು ಈ ಗ್ರಂಥದಲ್ಲಿ ನಿರೂಪಿಸಲ್ಪಟ್ಟಿದೆ. ಆದ್ದರಿಂದ ಇದಕ್ಕಿಟ್ಟಿರುವ ಶ್ರೀ ಸಿದ್ಧಾಂತ ಶಿಖಾಮಣಿಯೆಂಬ ನಾಮವು ಸಾರ್ಥಕವಾದುದಾಗಿದೆ.

### ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಪ್ರತಿಪಾದಿತವಾದ ಸ್ಥಲಗಳು

ವೀರಶೈವ ಸಿದ್ಧಾಂತದಲ್ಲಿ 'ಸ್ಥಲ' ಶಬ್ದವು ಒಂದು ಪ್ರಮುಖವಾದ ದಾರ್ಶನಿಕ ಪಾರಿಭಾಷಿಕ ಶಬ್ದವಾಗಿದೆ. ಯಾವುದಕ್ಕೆ ಪರಶಿವ ಪರಬ್ರಹ್ಮವೆಂಬ ಶಬ್ದಗಳು ಪ್ರಯೋಗಿಸಲ್ಪಟ್ಟಿರುತ್ತವೆಯೋ ಅದಕ್ಕೇನೇ ಇಲ್ಲಿ 'ಸ್ಥಲ'ವೆಂಬುದಾಗಿ ಕರೆಯಲಾಗಿದೆ.

ಸ್ಥೀಯತೇ ಲೀಯತೇ ಯತ್ರ ಜಗದೇತಚ್ಚರಾಚರಮ್ ।
ಪುನಃ ಪುನಸ್ಸಮುತ್ಪತ್ತಿಂ ತಲ್ಲಿಂಗಂ ಬ್ರಹ್ಮಶಾಶ್ವತಮ್ ॥

ಈ ಉಕ್ತಿಯಂತೆ ಈ ಚರಾಚರಾತ್ಮಕವಾದ ಜಗತ್ತು ಯಾವುದರಲ್ಲಿ ಇರುತ್ತದೆಯೋ, ಕೊನೆಗೆ ಯಾವುದರಲ್ಲಿ ಲಯವಾಗುತ್ತದೆಯೋ ಅಂತಹ ಆ ಪರಶಿವಲಿಂಗಕ್ಕೆ ಅರ್ಥಾತ್ ಪರಬ್ರಹ್ಮತತ್ತ್ವಕ್ಕೆ 'ಸ್ಥಲ'ವೆಂಬುದಾಗಿ ಕರೆಯಲಾಗಿದೆ. ಈ ಸ್ಥಲತತ್ತ್ವವು ತನ್ನ ವಿನೋದಕ್ಕಾಗಿ ಅಂಗಸ್ಥಲ ಮತ್ತು ಲಿಂಗಸ್ಥಲವೆಂಬುದಾಗಿ ವಿಭಾಗವನ್ನು ಪಡೆಯುತ್ತದೆ. ಮುಂದೆ ಆ ಅಂಗಸ್ಥಲವು ತ್ಯಾಗಾಂಗ, ಭೋಗಾಂಗ ಮತ್ತು ಯೋಗಾಂಗವೆಂತಲೂ, ಅದೇ ಪ್ರಕಾರವಾಗಿ ಲಿಂಗಸ್ಥಲ ಕೂಡ ಇಷ್ಟಲಿಂಗ, ಪ್ರಾಣಲಿಂಗ ಹಾಗೂ ಭಾವಲಿಂಗ ಎಂಬುದಾಗಿ ಮೂರು ವಿಧವಾಗಿ ರೂಪುಗೊಳ್ಳುತ್ತದೆ. ಮುಂದೆ ಈ ಮೂರು ಮೂರು ಅಂಗ ಮತ್ತು ಲಿಂಗಸ್ಥಲಗಳು ಇನ್ನಷ್ಟು ವಿಸ್ತಾರಗೊಂಡು ಆರು-ಆರು ಪ್ರಕಾರಗಳಾಗುತ್ತವೆ. ಅವುಗಳಲ್ಲಿ ತ್ಯಾಗಾಂಗವು ಭಕ್ತ ಮತ್ತು ಮಹೇಶನೆಂತಲೂ, ಭೋಗಾಂಗವು ಪ್ರಸಾದಿ ಹಾಗೂ ಪ್ರಾಣಲಿಂಗಿಯೆಂತಲೂ, ಅದೇ ಪ್ರಕಾರವಾಗಿ ಯೋಗಾಂಗವು ಶರಣ ಮತ್ತು ಐಕ್ಯವೆಂಬುದಾಗಿಯೂ ಆರು ಪ್ರಕಾರವಾಗಿ ವಿಕಾಸಗೊಳ್ಳುತ್ತದೆ.

ಇದರಂತೆಯೇ ಇಷ್ಟಲಿಂಗವು ಆಚಾರಲಿಂಗ, ಗುರುಲಿಂಗವೆಂದು, ಪ್ರಾಣಲಿಂಗವು ಶಿವಲಿಂಗ ಜಂಗಮಲಿಂಗವೆಂದು ಮತ್ತು ಭಾವಲಿಂಗವು ಪ್ರಸಾದಲಿಂಗ ಮತ್ತು ಮಹಾಲಿಂಗವೆಂಬುದಾಗಿ ವಿಕಾಸಗೊಳ್ಳುವುದು. ಹೀಗೆ ಅಂಗ-ಲಿಂಗಗಳು ಷಡ್‌ವಿಧಗಳಾಗಿ ರೂಪಗೊಂಡು ಅಂಗಷಟ್‌ಸ್ಥಲ ಮತ್ತು ಲಿಂಗಷಟ್‌ಸ್ಥಲಗಳೆಂಬುದಾಗಿ ರೂಪುಗೊಳ್ಳುತ್ತವೆ. ಈ ಅಂಗ ಹಾಗೂ ಲಿಂಗಷಟ್‌ಸ್ಥಲಗಳನ್ನೇ ಶ್ರೀ ಶಿವಯೋಗಿ ಶಿವಾಚಾರ್ಯರು ಕ್ರಮವಾಗಿ ನಲ್ವತ್ನಾಲ್ಕು ಹಾಗೂ ಐವತ್ತೇಳು ವಿಭಾಗಗಳಲ್ಲಿ ಸೂಕ್ಷ್ಮವಾಗಿ ವಿವೇಚಿಸಿದ್ದನ್ನಿಲ್ಲಿ ಕಾಣಬಹುದಾಗಿದೆ.

ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ತತ್ತ್ವಶಾಸ್ತ್ರದ ವಿಶ್ಲೇಷಣೆಯ ಜೊತೆಗೆ ಸಾಧಕನಿಗೆ ಅವಶ್ಯವಾಗಿ ಬೇಕಾಗಿರುವ ಆಚಾರ-ವಿಚಾರಗಳ ಬಗ್ಗೆಯೂ ಕೂಲಂಕಷವಾಗಿ ವಿವೇಚಿಸಲಾಗಿದೆ. ವೀರಶೈವ ಸಿದ್ಧಾಂತದ ಪ್ರಮುಖ ತತ್ತ್ವಗಳಾದ